ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ. ಮಲ್ಲೇಶ್ವರಂ. ಬೆಂಗಳೂರು

*****************************************************************************

**ಸಂಖ್ಯೆ : ಗಣಕಶಾಖೆ/ತಾ.ನೋ.ಅ.ತಂ/01/2020-21** **ದಿನಾಂಕ: 28-05-2020**

**– ಸುತ್ತೋಲೆ –**

**ವಿಷಯ: ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಜಾಲತಾಣದಲ್ಲಿ ಬಿ.ಇ.ಓ. ಲಾಗಿನ್ ಸೃಜಿಸಿರುವ ಬಗ್ಗೆ**

*******

ಈಗಾಗಲೇ ಮಂಡಳಿಯ ಜಾಲತಾಣದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಂಬಂಧಿಸಿದಂತೆ ಶಾಲಾ ಮುಖ್ಯ ಶಿಕ್ಷಕರಿಗೆ ಶಾಲಾ ಲಾಗಿನ್‌ನ್ನು ಸೃಜಿಸಲಾಗಿದ್ದು, ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಆನ್‌ಲೈನ್‌ನಲ್ಲಿ ಈ ಮೂಲಕವೇ ನಿರ್ವಹಿಸುತ್ತಿದ್ದಾರೆ. ಅದೇ ರೀತಿ ಜಿಲ್ಲಾ ಹಂತದಲ್ಲಿ ಜಿಲ್ಲಾ ನೋಡಲ್ ಅಧಿಕಾರಿಗಳಿಗಾಗಿ ಇ.ಓ. ಲಾಗಿನ್‌ನ್ನು ಸೃಜಿಸಲಾಗಿದ್ದು ಜಿಲ್ಲಾ ಹಂತದಲ್ಲಿ ನಿರ್ವಹಿಸಬೇಕಾದ, ಮೇಲುಸ್ತುವಾರಿ ಮಾಡಬೇಕಾದ ಪರೀಕ್ಷಾ ಕಾರ್ಯಚಟುವಟಿಕೆಗಳನ್ನು ಲಾಗಿನ್ ಮೂಲಕವೇ ನಿರ್ವಹಿಸುತ್ತಿದ್ದಾರೆ. ಮುಂದುವರೆದು, ತಾಲ್ಲೂಕು ಹಂತದಲ್ಲಿಯೂ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಂಬಂಧಿಸಿದಂತೆ ಮೇಲುಸ್ತುವಾರಿ ಮಾಡಬೇಕಾದ ಕಾರ್ಯಗಳು ಹೆಚ್ಚಾಗಿದ್ದು ಅದಕ್ಕಾಗಿ ಮಂಡಳಿಯ ಜಾಲತಾಣದಲ್ಲಿ ಬಿ.ಇ.ಓ. ಲಾಗಿನ್‌ನ್ನು ಸೃಜಿಸಲಾಗಿದೆ.

ಈ ಬಿ.ಇ.ಓ. ಲಾಗಿನ್‌ನನ್ನು **http://www.kseeb.kar.nic.in** ಜಾಲತಾಣದ ಮೂಲಕ ತಲುಪಬಹುದಾಗಿದೆ. ಜಾಲತಾಣದಲ್ಲಿನ ಲಾಗಿನ್ ಮೇಲೆ click ಮಾಡಿದಾಗ Dropdown Menu ನಲ್ಲಿ ಬರುವ BEO login ಮೇಲೆ ಕ್ಲಿಕ್ ಮಾಡಿದರೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ತಂತ್ರಾಂಶ ತೆರೆದುಕೊಳ್ಳುತ್ತದೆ.

ಈಗಾಗಲೇ ಇ.ಓ. ಲಾಗಿನ್‌ನಲ್ಲಿ ದಾಖಲಿಸಿರುವ Block Nodal Officer ರವರ Registered ಮೊಬೈಲ್ ಸಂಖ್ಯೆಗೆ **Username and Default Password** ಕಳುಹಿಸಲಾಗಿದ್ದು, ಮೊದಲಿಗೆ ಅದನ್ನು ಬಳಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಲಾಗಿನ್ ಅಗಬೇಕು. ಮೊದಲ ಲಾಗಿನ್ ಆದ ನಂತರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಬರುವ **OTP** ಯನ್ನು ಬಳಸಿ **password** ಬದಲಾಯಿಸಿಕೊಳ್ಳಬೇಕು.

ಉದಾಹರಣೆಗೆ, ಬೆಂಗಳೂರು ಉತ್ತರ ವಲಯ-1 ರ ಬಿ.ಇ.ಓ.ರವರ Username and Default Password ಈ ರೀತಿ ಇರುತ್ತದೆ.

**Username : BEOAN01**

**Password :** Block Nodal Officer ರವರ Registered ಮೊಬೈಲ್ ಸಂಖ್ಯೆಗೆ **SMS** ಮೂಲಕ ಕಳುಹಿಸಲಾಗಿದೆ.

ಬ್ಲಾಕ್ ಹಂತದ ಲಾಗಿನ್ ಬಳಸಿ ತಮ್ಮ ವ್ಯಾಪ್ತಿಯಲ್ಲಿ ಪರೀಕ್ಷಾ ಸಂಬಂಧಿ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಮೇಲುಸ್ತುವಾರಿ ಮಾಡಲು ಈ ಮೂಲಕ ಸೂಚಿಸಿದೆ.

28/5/2020

(ಸುಮಂಗಲ. ವಿ)
ನಿರ್ದೇಶಕರು, (ಪರೀಕ್ಷೆಗಳು)

**ಅಗತ್ಯ ಕ್ರಮಕ್ಕಾಗಿ :**

ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರ ಮೂಲಕ

**ಪ್ರತಿಗಳನ್ನು :**

1. ಮಂಡಳಿಯ ನಿರ್ದೇಶಕರ ಆಪ್ತ ಶಾಖೆ
2. ಕಾರ್ಯದರ್ಶಿಗಳ ಆಪ್ತ ಶಾಖೆ
3. ಶಾಖಾಧಿಕಾರಿಗಳು, ಆಡಳಿತ ಶಾಖೆ
4. ಶಾಖಾಧಿಕಾರಿಗಳು, ಲೆಕ್ಕಪತ್ರ ಶಾಖೆ
5. ಶಾಖಾಧಿಕಾರಿಗಳು, ಎಲ್ಲಾ ಪರಿಶೀಲನಾ ಶಾಖೆಗಳು (ಅನುಪಾಲನೆಗಾಗಿ)